324 (152) ಶ್ರೀ. ರಾಮಸ್ವಾಮಿ ಎ.ಟಿ:– ಮಾನ್ಯ ಜಲ ಸಂಪನ್ಮೂಲ ಮತ್ತು ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಾವೇರಿ ನೀರಾವರಿ ನಿಗಮದಲ್ಲಿ ಅವಶ್ಯಕ ಕಾಮಗಾರಿಗಳನ್ನು ಮಾಡಿಸಲು ಹಣಕಾಸಿನ ತೊಂದರೆಯಿರುವುದು ಸರ್ಕಾರಕ್ಕೆ ತಿಳಿದಿಲ್ಲವೆ

ಆ) ಕಾವೇರಿ ನೀರಾವರಿ ನಿಗಮದಲ್ಲಿನ ಬಹುತೇಕ ಕಾಮಗಾರಿಗಳನ್ನು ಮಾಡದಂತೆ, ಸ್ಥಗಿತಗೊಳಿಸಿರುವುದು ಸರ್ಕಾರಕ್ಕೆ ತಿಳಿದಿದೆಯೆ

ಇ) ಸರ್ಕಾರ ಕಾಮಗಾರಿಗಳನ್ನು ಮಾಡಲು ಏನು ಕ್ರಮ ಕೈಗೊಂಡಿದೆ

ಈ) ಕಾವೇರಿ ನೀರಾವರಿ ನಿಗಮದಲ್ಲಿ ಪಾವತಿಗಾಗಿ ಬಾಕಿ ಇರುವ ಬಿಲ್ಲಿನ ಹಣ ಎಷ್ಟು

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲ ಸಂಪನ್ಮೂಲ ಮತ್ತು ಸಾರಿಗೆ ಸಚಿವರು):

ಅ) ಅವಶ್ಯಕ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ಸಂಪನ್ಮೂಲವನ್ನು ಕ್ರೋಢೀಕರಿಸುವ ಸಲುವಾಗಿ ಸರ್ಕಾರದ ಖಾತರಿಯನ್ನು ನೀಡಲಾಗಿದೆ.

ಆ) ಸಂಪನ್ಮೂಲ ಲಭ್ಯತೆ ಅನುಗುಣವಾಗಿ ನೀರಾವರಿ ಸಾಮರ್ಥ್ಯವನ್ನು ಕಲ್ಪಿಸುವ ಕಾಮಗಾರಿಗಳನ್ನು ಅದ್ಯತೆ ಮೇರೆಗೆ ಕೈಗೆತ್ತಿಕೊಳ್ಳಲಾಗುತ್ತಿದೆ.

ಇ) ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ಸಂಪನ್ಮೂಲ ಕ್ರೋಢೀಕರಿಸಲು ಸರ್ಕಾರದ ಖಾತರಿ ನೀಡಲಾಗಿದೆ.

ಈ) ದಿ:31–12–04ರ ಅಂತ್ಯಕ್ಕೆ ಕಾವೇರಿ ನೀರಾವರಿ ನಿಗಮದಲ್ಲಿ ಪಾವತಿಗಾಗಿ ಬಾಕಿ ಇರುವ ಬಿಲ್ಲಿನ ಮೊತ್ತ ರೂ.324.13 ಕೋಟಿಗಳು.

325 (33) ಶ್ರೀ ರವಿ (ಚಿಕ್ಕಮಗಳೂರು):– ಮಾನ್ಯ ಜಲ ಸಂಪನ್ಮೂಲ ಮತ್ತು ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಿ.ಮೀ. ಲೆಕ್ಕದಲ್ಲಿ ಹಾಲಿ ಇರುವ ಸಾರಿಗೆ ಸಂಸ್ಥೆಯ ಸರಾಸರಿ ಪ್ರಯಾಣದರ ಎಷ್ಟು?

ಆ) ಪ್ರಯಾಣ ದರ ಪದೇ ಪದೇ ಹೆಚ್ಚಳಕ್ಕೆ ಕಾರಣಗಳೇನು?

ಇ) ಈ ನಿಟ್ಟಿನಲ್ಲಿ ಸರ್ಕಾರದ ಚಿಂತನೆಗಳೇನು?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು):

ಅ) ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯಲ್ಲಿ ಕಿ.ಮೀ. ಲೆಕ್ಕದಲ್ಲಿ ಸರಾಸರಿ ಪ್ರಯಾಣದರವು ಪ್ರಯಾಣಿಕರ ಕಿ.ಮೀ. ಒಂದಕ್ಕೆ 36.01 ಪೈಸೆ ಇರುತ್ತದೆ.

ಆ) ಇಂಧನ ದರಗಳು ಪದೇ ಪದೇ ಹೆಚ್ಚಾಗುತ್ತಿರುವುದರಿಂದ ಹಾಗೂ ಸಂಸ್ಥೆಯ ನೌಕರರ ವೇತನ ಪರಿಷ್ಕರಣೆಯಿಂದ ಸಂಸ್ಥೆಯ ಕಾರ್ಯಾಚರಣೆ ವೆಚ್ಚವು ಹಚ್ಚಾಗುತ್ತದೆ, ಈ ರೀತಿ ಹೆಚ್ಚಾಗುವ ಕಾರ್ಯಾಚರಣೆಯ ವೆಚ್ಚವನ್ನು ಸರಿದೂಗಿಸಲು ಪ್ರಯಾಣ ದರಗಳನ್ನು ಪರಿಷ್ಕರಿಸಲಾಗಿದೆ.

ಇ) ಪ್ರಯಾಣ ದರಗಳನ್ನು ಆದಷ್ಟು ಕಡಿಮೆ ಮಟ್ಟದಲ್ಲಿಡುತ್ತಾ, ಸಂಸ್ಥೆಯಲ್ಲಿ ಹೆಚ್ಚಾಗುತ್ತಿರುವ ವೆಚ್ಚವನ್ನು ಸರಿದೂಗಿಸಲು ಪ್ರಯತ್ನಿಸಲಾಗುತ್ತಿದೆ.

326 (37) ಶ್ರೀ ರವಿ ಸಿ.ಟಿ. (ಚಿಕ್ಕಮಗಳೂರು):– ಸನ್ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕುವೆಂಪುರವರ ಜನ್ಮ ಶತಮಾನೋತ್ಸವದ ಅಂಗವಾಗಿ ಸರ್ಕಾರ ಹಮ್ಮಿಕೊಂಡಿರುವ ವಿವಿಧ ಕಾರ್ಯಯೋಜನೆಗಳಾವುವು;

ಆ) ಇದಕ್ಕಾಗಿ ಸರ್ಕಾರ ನಿಗದಿಪಡಿಸಿರುವ ಹಾಗೂ ಇದುವರೆಗೆ ಖರ್ಚಾಗಿರುವ ಹಣವೆಷ್ಟು

ಇ) ಮುಂದಿನ ಕಾರ್ಯಕ್ರಮಕ್ಕಾಗಿ ಹಣಕಾಸಿನ ತೊಂದರೆ, ಅಥವಾ ಕೊರತೆ ಎದುರಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಆ ನಿಟ್ಟಿನಲ್ಲಿ ಶತಮಾನೋತ್ಸವಕ್ಕಾಗಿ ಶಾಶ್ವತ ಯೋಜನೆಗಳನ್ನು ರೂಪಿಸಲಾಗಿದೆಯೇ: ಅವು ಯಾವುವು;

ಉ) ಹಾಗಿದ್ದಲ್ಲಿ, ಇದೇ ರೀತಿ ಶತಮಾನೊತ್ಸವ ಆಚರಿಸಲು ನಿರ್ಧರಿಸುವ ಇತರೆ ಸಾಹಿತಿಗಳ ಹೆಸರು ಹಾಗೂ ವಿವರಗಳನ್ನು ಒದಗಿಸುವುದು.

ಶ್ರೀ ಎನ್. ಧರ್ಮಸಿಂಗ್ (ಸನ್ಮಾನ್ಯ ಮುಖ್ಯಮಂತ್ರಿಗಳು):

ಅ) ಅನುಬಂಧ–1 ಲಗತ್ತಿಸಿದೆ.

ಆ) ನಿಗದಿಪಡಿಸಿರುವುದಿಲ್ಲ. ಸರ್ಕಾರ ಮಂಜೂರು ಮಾಡಿರುವ ಮೊತ್ತ ರೂ.50.00 ಲಕ್ಷಗಳು (ಎರಡು ಕಂತುಗಳಲ್ಲಿ) ವೆಚ್ಚವಾಗಿರುವ ಮೊತ್ತ ರೂ.44,13,443–00 ಕುವೆಂಪು ಪ್ರತಿಷ್ಠಾನಕ್ಕೆ 35.00 ಲಕ್ಷಗಳನ್ನು ಬಿಡುಗಡೆಮಾಡಲಾಗಿದೆ.

ಇ) ಇಲ್ಲ.

ಈ) ಭಾಷಾ ಭಾರತಿ ಸ್ಥಾಪನೆ ಹಾಗೂ ಕುವೆಂಪು ಸಾಹಿತ್ಯವನ್ನು ಆಧರಿಸಿದ ಸಾಕ್ಷ್ಯಚಿತ್ರ ನಿರ್ಮಾಣ

ಉ) ಡಾ: ಪು.ತಿ.ನರಸಿಂಹಾಚಾರ್
ಡಾ: ಗೋರೂರು ರಾಮಸ್ವಾಮಿ ಅಯ್ಯಂಗಾರ್
ದಿ. ರಾ.ಶಿವರಾಮ
ದಿ. ಎಲ್.ಗುಂಡಪ್ಪ

ಅನುಬಂಧ–1

1. ದಿನಾಂಕ: 20–12–2003 ರಂದು ಬೆಂಗಳೂರಿನಲ್ಲಿ ಹಾಗೂ ರಾಜ್ಯದಾದ್ಯಂತ ಎಲ್ಲ ಜಿಲ್ಲೆಗಳಲ್ಲಿ ಶತಮಾನೋತ್ಸವದ ಉದ್ಘಾಟನಾ ಸಮಾರಂಭ ನಡೆಸಿದೆ.
2. 250 ಮಂದಿ ಗಾಯಕ ಗಾಯಕಿಯರಿಂದ ದಿನಾಂಕ 29–12–2003ರಂದು ಉದ್ಘಾಟನಾ ಸಮಾರಂಭದಲ್ಲಿ ಕುವೆಂಪು ಅವರ ಗೀತೆಗಳ ಗಾಯನ ಕಾರ್ಯಕ್ರಮ ನಡೆದಿದೆ.
3. ಪ್ರತಿ ಜಿಲ್ಲೆಯಲ್ಲಿ ಜಿಲ್ಲಾ ಮಟ್ಟದಲ್ಲಿ ಜಿಲ್ಲಾಧಿಕಾರಿಗಳವರ ಅಧ್ಯಕ್ಷತೆಯಲ್ಲಿ ಜಿಲ್ಲಾ ಸಮಿತಿ ಹಾಗೂ ತಹಶೀಲ್ದಾರರ ಅಧ್ಯಕ್ಷತೆಯಲ್ಲಿ ತಾಲ್ಲೂಕುಮಟ್ಟದಲ್ಲಿ ಸಮಿತಿಯನ್ನು ಸ್ಥಳೀಯವಾಗಿ ರಚಿಸಿಕೊಂಡಿದ್ದು ದಿನಾಂಕ 29–12–2003 ರಂದು ಕುವೆಂಪು ಶತಮಾನೋತ್ಸವ ಉದ್ಘಾಟನಾ ಸಮಾರಂಭ ನಡೆದಿದೆ.
4. ಪ್ರತಿ ಜಿಲ್ಲೆಯಲ್ಲಿ ಕುವೆಂಪು ಅವರ ಜೀವನ ಹಾಗೂ ಸಾಹಿತ್ಯಕ್ಕೆ ಸಂಬಂಧಿಸಿದಂತೆ ವಿಚಾರಸಂಕಿರಣ, ಉಪನ್ಯಾಸ, ನಾಟಕ ಪ್ರದರ್ಶನ ಹಾಗೂ ಸ್ಪರ್ಧೆಗಳನ್ನು ನಡೆಸಲಾಗಿದೆ.
5. ಕುವೆಂಪು ಕೃತಿಗಳನ್ನು ಆಧರಿಸಿ ನೃತ್ಯ ರೂಪಕಗಳನ್ನು ದಾವಣಗೆರೆ, ಶಿವಮೊಗ್ಗ,

ತುಮಕೂರು, ಕೋಲಾರ, ಬೆಳಗಾಂ, ಬಿಜಾಪುರ, ಧಾರವಾಡ, ಕಾರವಾರ, ಗುಲ್ಬರ್ಗ, ಬೀದರ್, ಮೈಸೂರು, ಹಾಸನ, ಮಂಗಳೂರು, ಚಿಕ್ಕಮಗಳೂರು, ಬಳ್ಳಾರಿ, ರಾಯಚೂರು ಜಿಲ್ಲೆಗಳಲ್ಲಿ ನಡೆಸಲಾಗುತ್ತಿದೆ.

6. ವಿವಿಧ ಜಿಲ್ಲಾ ಕೇಂದ್ರಗಳಾದ ಬಿಜಾಪುರ–ಬಸವನಬಾಗೇವಾಡಿ–ಮುದ್ದೇಬಿಹಾಳ–ಮೈಸೂರು–ನಂಜನಗೂಡು–ಪಿರಿಯಾಪಟ್ಟಣ–ತುಮಕೂರು–ಚಿಕ್ಕನಾಯಕನಹಳ್ಳಿ–ಮಧುಗಿರಿ–ಹಾಸನ–ಸಕಲೇಶಪುರ–ಅರಸೀಕೆರೆ–ಕೋಲಾರ–ಚಿಕ್ಕಬಳ್ಳಾಪುರ–ಚಿಂತಾಮಣಿ–ಚಾಮರಾಜನಗರ–ಮಹದೇಶ್ವರ ಬೆಟ್ಟ– ಗುಂಡ್ಲುಪೇಟೆ–ಬೀದರ್–ಬಸವಕಲ್ಯಾಣ–ಮಂಗಳೂರು–ಧರ್ಮಸ್ಥಳ–ಪುತ್ತೂರು–ರಾಯಚೂರು–ಮಾನ್ವಿ–ಸಿಂಧನೂರು–ಉಡುಪಿ–ಮಣಿಪಾಲ್–ಕುಂದಾಪುರ–ಕಾರವಾರ–ಶಿರಸಿ ಸೋಂದಾ–ಕೊಪ್ಪಳ–ಗಂಗಾವತಿ–ಕುಷ್ಟಗಿ–ಚಿಕ್ಕಮಗಳೂರು–ಅಜ್ಜಂಪುರ–ಕಡೂರು–ಬೆಳಗಾಂ–ಗೋಕಾಕ–ನಿಪ್ಪಾಣಿ ಇಲ್ಲಿ ಕುವೆಂಪು ಅವರ ನಾಟಕಗಳ ಪ್ರದರ್ಶನ ನಡೆದಿದೆ.

7. ಕುವೆಂಪು ಅವರ ವೈಚಾರಿಕ ಗೀತೆಗಳ ಧ್ವನಿ ಸುರಳಿಯನ್ನು ಸಂಗೀತ ಸಂಸ್ಥೆಯ ಪ್ರಾಯೋಜನೆಯೊಂದಿಗೆ ಬಿಡುಗಡೆ ಮಾಡಲಾಗಿದೆ.

8. ಕುವೆಂಪು ಅವರ ಕತೆ, ಕಾದಂಬರಿ, ಕೃತಿಗಳ ಪ್ರಕಟಣೆಗಳು

ಅ. ಕಿಂದರ ಜೋಗಿ
(ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯದ ಪ್ರಕಟಣೆ)

ಆ. ಬೆರಳ್–ಗೆ–ಕೊರಳ್, ಜಲಗಾರ, ಶೂದ್ರ ತಪಸ್ವಿ–1 ಸಂಪುಟ
(ಕರ್ನಾಟಕ ಸಾಹಿತ್ಯ ಅಕಾಡೆಮಿಯ ಸಹಯೋಗದೊಂದಿಗೆ ಪ್ರಕಟಣೆ–ಇಲಾಖೆಯ ಧನಸಹಾಯ)

ಇ. ಕುವೆಂಪು ಅವರ ಸಾಹಿತ್ಯದಲ್ಲಿನ ವಿಷಯಗಳ ಕುರಿತ ಚಿತ್ರ ಸಂಪುಟ
(ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯದ ಪ್ರಕಟಣೆ)

ಈ. ಸಮಗ್ರ ಗದ್ಯ ಸಂಪುಟ–1 ಮತ್ತು 2 ಸಂಪುಟಗಳು
(ಹಂಪಿ ವಿಶ್ವವಿದ್ಯಾಲಯದ ಸಹಯೋಗದೊಂದಿಗೆ–ಇಲಾಖೆಯ ಧನಸಹಾಯ)

ಉ. "ಶ್ರೀ ರಾಮಾಯಣದರ್ಶನಂ" ಸಂಸ್ಕೃತ ಆವೃತ್ತಿ ಪ್ರಕಟಣೆ
(ಅನುವಾದ ಶ್ರೀ ಸಿ.ಜಿ.ಪುರುಷೋತ್ತಮ್–ಇಲಾಖೆಯ ಧನಸಹಾಯ)

ಊ. ಬೆರಳ್–ಗೆ–ಕೊರಳ್, ಶೂದ್ರ ತಪಸ್ವಿ, ಸ್ಮಶಾನ ಕುರುಕ್ಷೇತ್ರ–ನಾಟಕ ಸಂಪುಟ–ಇಂಗ್ಲಿಷ್ ಆವೃತ್ತಿ–(ಅನುವಾದ: ಡಾ: ಪ್ರಭುಶಂಕರ್)
(ಕನ್ನಡ ಪುಸ್ತಕ ಪ್ರಾಧಿಕಾರದಿಂದ ಪ್ರಕಟಣೆ)

ಎ. ಕುವೆಂಪು ಸಮಗ್ರ ನಾಟಕ ಸಂಪುಟ ಮುದ್ರಿಸಲಾಗಿದೆ.
(ಹಂಪಿ ವಿಶ್ವವಿದ್ಯಾಲಯದ ಸಹಯೋಗದೊಂದಿಗೆ–ಇಲಾಖೆಯ ಧನಸಹಾಯ)

ಐ. "ಶ್ರೀ ರಾಮಾಯಣ ದರ್ಶನಂ" ಕೃತಿಯ ಕನ್ನಡ ಆವೃತ್ತಿಯ ಪುನರ್ ಮುದ್ರಣವಾಗಿದೆ.
(ಕನ್ನಡ ಪುಸ್ತಕ ಪ್ರಾಧಿಕಾರದ ಸಹಯೋಗದೊಂದಿಗೆ–ಇಲಾಖೆಯ ಧನಸಹಾಯ)

ಒ. ಕುವೆಂಪು ಅವರ ಸಣ್ಣ ಕಥೆಗಳ ಇಂಗ್ಲಿಷ್ ಆವೃತ್ತಿ ಮುದ್ರಣವಾಗಿದೆ.

(ಅನುವಾದ ಶ್ರೀ ಪಿ. ಶ್ರೀನಿವಾಸರಾವ್–ಇಲಾಖೆಯ ಪ್ರಕಟಣೆ)

ಓ. " ಶ್ರೀ ರಾಮಾಯಣ ದರ್ಶನಂ" ಇಂಗ್ಲಿಷ್ ಆವೃತ್ತಿಯ ಪ್ರಕಟಣೆ.

(ಕೇಂದ್ರ ಸಾಹಿತ್ಯ ಅಕಾಡೆಮಿ)

9. ಶಾಲಾ ಕಾಲೇಜುಗಳಲ್ಲಿ ಕುವೆಂಪು ಅವರ ಹಾಗೂ ಅವರ ಸಾಹಿತ್ಯ ಕುರಿತು ವಿಚಾರಸಂಕಿರಣ, ಉಪನ್ಯಾಸ, ಸ್ಪರ್ಧೆಗಳು ಇತ್ಯಾದಿಗಳನ್ನು ಒಳಗೊಂಡಂತೆ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆದಿವೆ.

10. ಕುವೆಂಪು ಹಾಗೂ ಅವರ ಸಾಹಿತ್ಯ ಸೃಷ್ಟಿಗೆ ಕಾರಣವಾದ ನಿಸರ್ಗ ಚಿತ್ರಗಳನ್ನು ಒಳಗೊಂಡ ಸರ್ಕಾರಿ ಕ್ಯಾಲೆಂಡರ್‌ನ್ನು ಹೊರತರಲಾಗಿದೆ.

11. ದಿನಾಂಕ: 29–12–2003 ರಿಂದ ದಿನಾಂಕ: 28–12–2004 ರವರೆಗೆ "ವಿಶ್ವ ಮಾನವ ವರ್ಷ" ವೆಂದು ಘೋಷಿಸಲಾಗಿದೆ.

12. ಕುಪ್ಪಳ್ಳಿಯಿಂದ ಹಿರೇಕೊಡಿಗೆಯವರೆಗಿನ ಅರಣ್ಯ ಪ್ರದೇಶವನ್ನು "ಬಯೋರಿಜರ್ವ್" ಎಂದು ಘೋಷಿಸಿದೆ.

13. ಸರ್ಕಾರದ ಎಲ್ಲಾ ಪ್ರಕಟಣೆಗಳ ಮೇಲೆ "ವಿಶ್ವ ಮಾನವ ವರ್ಷ" ವೆಂದು ನಮೂದಿಸಿ "ವಿಶ್ವ ಮಾನವ ಸಂದೇಶ" ವನ್ನು ಮುದ್ರಿಸಲಾಗಿದೆ.

14. "ಜಯ ಭಾರತ ಜನನಿಯ ತನುಜಾತೆ" ಗೀತೆಯನ್ನು ನಾಡಗೀತೆಯಾಗಿ ಘೋಷಿಸಲಾಗಿದೆ.

15. ನವದೆಹಲಿಯಲ್ಲಿ ಕುವೆಂಪು ಕುರಿತು ಅವರ ಜೀವನ ಹಾಗೂ ವಿಚಾರ ಧಾರೆಗಳ ವಿವಿಧ ಕಾರ್ಯಕ್ರಮಗಳನ್ನು ನಡೆಸಲಾಗಿದೆ.

16. ಹೊರರಾಜ್ಯಗಳಲ್ಲಿ ಕುವೆಂಪು ಅವರ ಕುರಿತ ನಾಟಕ ಪ್ರದರ್ಶನ ಗೀತಗಾಯನ, ವಿಚಾರ ಸಂಕಿರಣಗಳು ನಡೆದಿವೆ.

17. ಬೆಂಗಳೂರು ದಕ್ಷಿಣ ಭಾಗದಲ್ಲಿ 22 ಎಕರೆ ಪ್ರದೇಶದಲ್ಲಿ ಮಹಾನಗರ ಪಾಲಿಕೆ ನಿರ್ಮಿಸಲಿರುವ ತಾವರೆಕೆರೆ ಉದ್ಯಾನವನಕ್ಕೆ ಕುವೆಂಪು ಅವರ ಹೆಸರನ್ನಿಡಲು ಕ್ರಮ ಕೈಗೊಳ್ಳಲಾಗಿದೆ.

18. ಬೆಂಗಳೂರು ವಿಶ್ವವಿದ್ಯಾಲಯದ ಆವರಣದಲ್ಲಿ "ಭಾಷಾ ಭಾರತಿ" ಸ್ಥಾಪನೆಗೆ 2 ಎಕರೆ ಜಮೀನನ್ನು ಪಡೆಯಲಾಗಿದೆ. ಇಲ್ಲಿ ಕುವೆಂಪು ಅವರ ಸಾಹಿತ್ಯ ಮಾತ್ರವಲ್ಲದೆ ಎಲ್ಲ ಸಾಹಿತಿಗಳ ಸಾಹಿತ್ಯದ ಅನುವಾದ ಕಾರ್ಯವನ್ನು ಮಾಡಲಾಗುವುದು.

19. ಧಾರವಾಡದಲ್ಲಿ ದಿನಾಂಕ 30–11–2004 ರಂದು "ಅಂತರ ಭಾರತಿ" ಕವಿ ಸಮ್ಮೇಳನ ನಡೆದಿದೆ.

20. ಉಡುಪಿಯಲ್ಲಿ ಕೇಂದ್ರ ಸಾಹಿತ್ಯ ಅಕಾಡೆಮಿಯ ಪ್ರಾದೇಶಿಕ ಕೇಂದ್ರವು 29 ಡಿಸೆಂಬರ್ 2004 ಮಾಹೆಯಲ್ಲಿ ಕುವೆಂಪು ಅವರ ಹಾಗೂ ಅವರ ಸಾಹಿತ್ಯ ಕುರಿತು ವಿಚಾರ ಸಂಕಿರಣ ನಡೆಸಿದೆ.

ಹೀಗೆ ಹಲವಾರು ಯೋಜನೆಗಳು ಅನುಷ್ಠಾನವಾಗುವ ಮೂಲಕ ಶತಮಾನೋತ್ಸವ ಯಶಸ್ವಿಯಾಗಿ ನಡೆದಿದೆ. ಯಾವುದೇ ಹಿನ್ನೆಡೆಯಾಗಿಲ್ಲ.